ರಾಣೆಬೆನ್ನೂರು ತಾಲ್ಲೂಕು, ಹಲಗೇರಿ ಗ್ರಾಮದವರಿಗೆ ಕುಡಿಯಲು ನೀರಿನ ಸೌಲಭ್ಯ ಒದಗಿಸುವುದು.

೧೩೧೪. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ವತ್ಪ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಣೆಬೆನ್ನೂರು ತಾಲ್ಲೂಕು ಹಲಗೇರಿ ಗ್ರಾಮದವರು ಕುಡಿಯುವ ನೀರಿನ ಬವಣೆಪಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಆ ಗ್ರಾಮದವರಿಗೆ ಹತ್ತಿರವಿರುವ ತುಂಗಭದ್ರ ನದಿಯಿಂದ ನೀರನ್ನು ಒದಗಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೆ ? ಹಾಗಿದ್ದಲ್ಲಿ ಎಷ್ಟು ಸಮಯದಲ್ಲಿ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) —

ಅ) ಬಂದಿದೆ.

ಆ) ತುಂಗಭದ್ರಾ ನದಿಯಿಂದ ಕುಡಿಯುವ ನೀರು ಒದಗಿಸುವ ಯೋಜನೆ ಇಲ್ಲ.

ಜಮಖಂಡಿಯಲ್ಲಿ ಹಾಲಿನ ಕೇಂದ್ರ ಪ್ರಾರಂಭಿಸುವುದು.

೧೧೫೭. ಶ್ರೀ ಜಿ. ಎಸ್. ಬಾಗಲಕೋಟೆ (ಜಮಖಂಡಿ).—ಮಾನ್ಯ ಪಶುವೈದ್ಯ ಹಾಗೂ ಪಶು ಸಂಗೋಪನಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಮಖಂಡಿ ತಾಲ್ಲೂಕ್ ಕೃಷ್ಣಾನದಿ ತೀರದಲ್ಲಿದ್ದು, ಅಲ್ಲಿ ಹಾಲು ಉತ್ಪಾದನೆಗೆ ಅವಕಾಶ ಗಳಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ ಹಾಲು ಶೇಖರಿಸುವ ಕೇಂದ್ರ ಸ್ಥಾಪಿಸುವುದು ಯೋಗ್ಯವಲ್ಲವೆ ;

ಇ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಸಿದ್ದರಾಮಯ್ಯ (ಪಶುವೈದ್ಯ ಹಾಗೂ ಪಶು ಸಂಗೋಪನಾ ಮಂತ್ರಿಗಳು).—

ಅ) ಬಂದಿದೆ.

ಆ) ಹೌದು.

ಇ) ಜಮಖಂಡಿ ತಾಲ್ಲೂಕಿನಲ್ಲಿ ಅಮೂಲ್ ಮಾದರಿಯ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗುತ್ತಿದೆ.

ಜಮಖಂಡಿ ತಾಲ್ಲೂಕ್ ಕಲ್ಲಳ್ಳಿ ಗ್ರಾಮಕ್ಕೆ ಕುಡಿಯಲು ನೀರಿನ ಸೌಲಭ್ಯ

೧೧೫೬. ಶ್ರೀ ಜಿ. ಎಸ್. ಬಾಗಲಕೋಟೆ (ಜಮಖಂಡಿ).—ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ಮತ್ತು ವತ್ಪ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಮಖಂಡಿ ತಾಲ್ಲೂಕ್ ಕೃಷ್ಣಾನದಿ ತೀರದಲ್ಲಿದ್ದು, ಅಲ್ಲಿ ಹಾಲು ಉತ್ಪಾದನೆಗೆ ಅವಕಾಶ ಗಳಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಹಾಲು ಶೇಖರಿಸುವ ಕೇಂದ್ರ ಸ್ಥಾಪಿಸುವುದು ಯೋಗ್ಯವಲ್ಲವೆ ;

ಇ) ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?